ರಾತ್ರಿ ಕೇತಕಿ ಸಂದೀಪನಿಗೆ ಕೇಳಿದಳು, 'ಅಲ್ಲಾ ಯಾರೋ ಮದ್ವೆನೆ ಬೇಡ ಅಂದಿದ್ರು. ಈಗ ನೋಡಿದ್ರೆ ಹೀಗೆ, ಏನು ಸಮಾಚಾರ'.

'ಕೇತಕಿ, ಈಗ್ಲೂ ನಾನು ಹಾಗೇ ಇದೀನಿ. ಪ್ರೀತಿ ಹೆಚ್ಚಿದಾಗ, ನೀನೂ ಇಷ್ಟಪಟ್ಟಾಗ ನಿನ್ನ ಸೇರ್ತಿನಿ. ಅದು ಬಿಟ್ರೆ ನನ್ನ ಜೀವನದಲ್ಲಿ ಅಂಥ ಏನೂ ಬದಲಾವಣೆಗಳಿಲ್ಲ. ಹಾಂ, ಅದ್ಕೆ ಕಾರಣನೂ ನೀನೇ. ನೀನು ಉಳಿದ ಹೆಣ್ಣುಮಕ್ಕಳಂತೆ ಅಲ್ಲ. ಇಗ್ಲೂ ಹೇಳ್ತಿನಿ ಕೇತಕಿ. ನೀನು ಸರ್ವಸ್ವತಂತ್ರಳು. ಮತ್ತೆ ಓದೇನಾದ್ರೂ ಮುಂದುವರೆಸುವ ಆಸೆ ಇದ್ರೆ ಓದು. ಯಾರ ಮಾತಿಗೂ ಕಿವಿಕೊಡಬೇಡ. ಇಷ್ಟೇ ಸಾಕು ಎಂದರೂ ನನ್ನ ಅಭ್ಯಂತರವಿಲ್ಲ. ಒಟ್ಟಿನಲ್ಲಿ ಮನುಷ್ಯ ಸುಖವಾಗಿರಬೇಕು, ಸಹಜವಾಗಿರಬೇಕು ಹಕ್ಕಿಗಳಂತೆ. ಬೇಕಷ್ಟೇ ಬದುಕಬೇಕು, ತಿನ್ನಬೇಕು, ತೀವ್ರವಾಗಿ ಸಾಂಗತ್ಯ ಬೇಕು ಅಂದಾಗಲಷ್ಟೇ ಸಂಗಾತಿಯೊಂದಿಗೆ ಸುಖಿಸಬೇಕು. ಅದೊಂದು ಯಾಂತ್ರಿಕ ಸ್ಪರ್ಶ ಸಂಘರ್ಷವಾಗಬಾರದು. ಹಕ್ಕಿಗಳನ್ನು ನೋಡು, ನಾಳೆಗಳೆ ಇಲ್ಲದಂತೆ ಬದುಕುತ್ತವೆ. ಗುರುತನ್ನೂ ಬಿಟ್ಟು ಹೋಗುವ ಕಷ್ಟ ತಕೊಳಲ್ಲ. ನಾನೂ ಹಾಗೆ ಬದುಕಬೇಕು. ಐ ವಾಂಟ್ ಟು ಬಿ ಫರ್ಗಾಟನ್, ನಂದೂ ಅಂತ ಯಾವುದೂ ಉಳಿಯಬೇಕಿಲ್ಲ. ಆ ಪ್ರಕೃತಿಯ ಸೃಷ್ಟಿ ನಾವು. ಅದೇ ಮಾಡಿಸುತ್ತೆ, ಅದೇ ನಮ್ಮನ್ನು ಬೇಕೆನಿಸಿದಾಗ ಕರೆದುಕೊಳ್ಳುತ್ತೆ. ಹಾಗೇ ಹೋಗಿ ಬಿಡಬೇಕು' ಎನ್ನುತ್ತಾ ಮುತ್ತಿಕ್ಕಿದ ಕೇತಕಿಯ ಹಣೆಗೆ.

ಕಣ್ಣು ತುಂಬಿ ಬಂತು, ಕೇತಕಿಗೆ. 'ಹೇ, ವಾಡೇಶ್ವರಾ, ಇವನನ್ನು ನಂಜೊತೆ ಸಾಯೋ ತನ್ಕ ಇರುವಂತೆ ಮಾಡು' ಎಂದು ಬೇಡಿಕೊಂಡಳು.

ಹಾಗೆ ಒರಗಿದವನಿಗೆ ನಿದ್ದೆ ಬಂತೆಂದು ಕಂಡೊಡನೆ ಕೇತಕಿಯೂ ತಬ್ಬಿ ಮಲಗಿದಳು.

★★★

ಮೈನಾಗಳ ಕಿಚಿಕಿಚಿ ಸದ್ದಿಗೆ ಕೇತಕಿಗೆ ಎಚ್ಚರವಾಯಿತು. ಗಂಟೆ ನೋಡಿದರೆ ಆಗಲೇ ಆರು ದಾಟಿದೆ. ಪಕ್ಕದಲ್ಲಿ ಸಂದೀಪ ನಿಶ್ಚಲನಾಗಿ ಮಲಗಿದ್ದ. ತನ್ನಿಂದ ಮೊದಲೇ ಏಳುವ ಇವನಿಗೇನಾಯಿತೋ ಎಂದು ಸಂದೀಪನನ್ನು ಕರೆದಳು. ಕೈ ಹಿಡಿದರೆ ತಣ್ಣಗೆ ಕೊರೆತ. ಎದೆ ಒಡೆದಂತಾಯಿತು. 'ಸಂದೀಪ...' ಕಿರುಚಿ ಕರೆದ ಸದ್ದಿಗೆ ಅಂಬಾಬಾಯಿ ಓಡಿ ಬಂದರು.

'ನಿದ್ದೆಯಲ್ಲೇ ಹೃದಯಾಘಾತವಾಗಿದೆ' ಎಂದರು ವೈದ್ಯರು. ಕಣ್ಣು ಕತ್ತಲು ಬಂದು ಬಿದ್ದ ಕೇತಕಿಯನ್ನೂ ಪರೀಕ್ಷಿಸಿದ ವೈದ್ಯರು ಅಂಬಾಬಾಯಿಯವರಲ್ಲಿ ನಿಧಾನಕ್ಕೆ, 'ಅಜ್ಜಿ ಆಗ್ತಿದಿರಿ' ಎಂದು ನಿರ್ವಿಕಾರ ದನಿಯಲ್ಲಿ ಹೇಳಿದಾಗ ಅಂಬಾಬಾಯಿ ಸೆರಗು ಬಾಯಿಗಿಟ್ಟುಕೊಂಡು ಕುಸಿದರು. ಕೇತಕಿ ಕಲ್ಲಿನಂತೆ ನಿಶ್ಚಲವಾದಳು. ಬಿಕ್ಕುತ್ತಿದ್ದವಳಿಗೆ ರಾತ್ರಿಯ ಮಾತುಗಳು ಕಿವಿಯಲ್ಲಿ ಮಾರ್ದನಿಸುತ್ತಿದ್ದವು – 'ನಂದೂ ಅಂತ ಏನೂ ಉಳಿಬೇಕಂತನೇ ಇಲ್ಲ ನಂಗೆ'.

## ದೀಪಾ ಫಡ್ಕೆ

ಹರಿದಾಸ ಸಾಹಿತ್ಯದಲ್ಲಿ ಪಿಎಚ್.ಡಿ. ಪದವಿ ಪಡೆದಿರುವ ದೀಪಾ ಅವರ 'ಋತ', 'ಹರಪನಹಳ್ಳಿ ಭೀಮವ್ವ' ಮತ್ತು ಐದು ವ್ಯಕ್ತಿ ಚಿತ್ರಣಗಳ ಪುಸ್ತಕಗಳು ಸೇರಿ ಒಟ್ಟು 7 ಕೃತಿಗಳು ಪ್ರಕಟವಾಗಿವೆ. ಪತ್ರಿಕೆಗಳಿಗೆ ಅನೇಕ ಲೇಖನಗಳನ್ನು ಬರೆದಿದ್ದಾರೆ. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.